# ಪ್ರೀತಿಯ ಆಖ್ಯಾನ

ಪ್ರೀತಿಸುವುದನ್ನು ಒಂದು ಕಲೆಯೆಂದೇ ಖ್ಯಾತ ಮನಃಶಾಸ್ತ್ರಜ್ಞ ಎರಿಕ್ ಫ್ರಾಂ ವಿವರಿಸಿದ್ದಾನೆ. ಪ್ರೇಮವು ಎರಡು ಹೃದಯಗಳನ್ನು ಪರಿಶುದ್ಧಗೊಳಿಸಿ ಔನ್ನತ್ಯಕ್ಕೇರಿಸುತ್ತದೆ ಎಂದೂ ಹೇಳುತ್ತಾರೆ. 'ನಿಜವಾದ ಪ್ರೇಮ ಸಾಗರದಂತೆ ವಿಶಾಲವಾದದ್ದು. ಆ ಸಾಗರ ಏರುತ್ತಾ ಉಬ್ಬುತ್ತಾ ಉರುಳುರುಳಿ ಇಡೀ ವಿಶ್ವವನ್ನೇ ಆವರಿಸಿಕೊಳ್ಳುತ್ತದೆ' ಎಂದು ಗಾಂಧಿ ಪ್ರೀತಿಯ ಅನಂತ ಸಾಧ್ಯತೆಯ ಬಗ್ಗೆ ಹೇಳಿದ್ದಾರೆ. ಪ್ರೀತಿ, ಪ್ರೇಮ ಎನ್ನುವುದನ್ನು ಬುದ್ಧದೇವ ವಿಶಾಲಾರ್ಥದಲ್ಲಿ 'ಲೋಕಕಾರುಣ್ಯ'ವೆಂದೇ ಹೇಳಿದ. ಅಂತಿಮವಾಗಿ ಪ್ರೇಮವೆನ್ನುವುದು ಕೇವಲ ಮನುಷ್ಯ ಜೀವಿಗಳ ನಡುವಿನ ಬಾಂಧವ್ಯ ಮಾತ್ರವಲ್ಲ, ಅದೊಂದು ಮಹಾಕರುಣೆಯ ನಡೆ.

ತೇಜಸ್ವಿ ಲೋಕಕಾರುಣ್ಯವನ್ನೇ ತನ್ನ ಬರಹಗಳ ಅಸ್ತಿಭಾರವನ್ನಾಗಿಸಿಕೊಂಡ ಲೇಖಕ. ಅವರ 'ಅಕ್ಕಮ್ಮ ಹೇಳಿದ ಕಥೆ' ಮಹಾಕರುಣೆಯ ನಡೆಗೊಂದು ದೊಡ್ಡ ಉದಾಹರಣೆ. ಸಿದ್ದೇಗೌಡರ ಹೆಂಡತಿ ಮಂಜಮ್ಮನ ಮನೆಗೆ ಒಮ್ಮೆ ಬೇಟೆಗಾರರಿಂದ ತಪ್ಪಿಸಿಕೊಂಡ ಜಿಂಕೆಯೊಂದು ತನ್ನ ಮರಿಯೊಂದಿಗೆ ಬಂದು ಸೇರಿಕೊಳ್ಳುತ್ತದೆ. ಇದು ಮಂಜಮ್ಮನಿಗೂ ತಿಳಿಯುತ್ತದೆ. ಬೇಟೆಯ ವಾಸನೆ ಹಿಡಿದು ಬಂದ ಬೇಟೆಗಾರರು ಜಿಂಕೆಯ ಬೆನ್ನುಹತ್ತಿ ಮಂಜಮ್ಮನ ಮನೆಗೆ ಕೋವಿ ಹಿಡಿದು ನುಗ್ಗಲು ಪ್ರಯತ್ನಿಸುತ್ತಾರೆ. ಆಗ ಮಂಜಮ್ಮ ಹೇಳಿದ್ದು ಒಂದೇ ಮಾತು, 'ನನಗೆ ಗುಂಡು ಹೊಡೆದು ಆಮೇಲೆ ನನ್ನ ಮನೆ ಒಳಗಿರೋ ಜಿಂಕೆಗೆ ಗುಂಡು ಹಾಕಬೇಕು. ಜೀವ ಉಳಿಸಿ ಅಂತ ಬಂದಿರೋದನ್ನ ನಿಮ್ಮ ಕೈಲಿ ಹೊಡೆಸಿದರೆ ಅದರ ಶಾಪ ತಟ್ಟದೆ ಇರುತ್ತಾ? ಯಾರ ಮನೆ ಹಾಳ್ಮಾಡಬೇಕಂತ ಇದೀರ' ಎಂದು ಜೋರು ಮಾಡಿದಳು. ಹೀಗೆ ದಿಟ್ಟವಾಗಿ ಹೇಳಿ 'ಅಕ್ಕಮ್ಮಾ ಕತ್ತಿ ತಗೊಂಡು ಬಾ, ನನ್ನ ಮನೆ ಹೊಸಿಲು ದಾಟಿ ಕೋವಿ ಎತ್ತಿದವರ ತಲೆ ಕಡಿದೇ ಬಿಡುತ್ತೇನೆ' ಎಂದು ಅಬ್ಬರಿಸಿದಳು. ಇವಳ ರೌದ್ರಾವತಾರ ನೋಡಿ ಬೇಟೆಗಾರರೆಲ್ಲಾ ಬರಿಗೈಯಲ್ಲಿ ಹೊರಟುಹೋದರು. ಪ್ರೇಮ ಎನ್ನುವುದು ಕೇವಲ ಗಂಡು–ಹೆಣ್ಣಿನ ನಡುವೆ ಬೆಳೆಯುವ ಬಾಂಧವ್ಯವಲ್ಲ! ಅದು ಎಲ್ಲವನ್ನೂ ಮೀರಿ ಲೋಕವನ್ನೇ ಆವರಿಸಿಕೊಳ್ಳುವ ಮಾನವೀಯ ನಡೆ ಎನ್ನುವುದು ಮಹಾಲೇಖಕರಲ್ಲಿ ಮಾತ್ರ ಕಂಡುಬರುತ್ತದೆ. ತೇಜಸ್ವಿ ಅಂತಹ ಲೇಖಕ.

ಜಗತ್ತಿನಲ್ಲಿ ಪ್ರೇಮಿಗಳನ್ನು ಕುರಿತು ಬಂದಿರುವ ಕವಿತೆ, ಕಥೆಗಳ ಹೊರೆಯೇ ಭೂಮಿ ಮತ್ತು ಆಕಾಶವನ್ನು ತುಂಬುವಷ್ಟಿದೆ. ಸಂಘರ್ಷವಿಲ್ಲದ ಪ್ರೀತಿ ಇರಲಾರದು! ಸಾಮಾನ್ಯವಾಗಿ ಪ್ರೇಮ ಸಂಬಂಧಗಳು ಅಂತ್ಯವಾಗುವುದು ವಿಯೋಗದೊಂದಿಗೆ ಅಥವಾ ಸಾವಿನೊಂದಿಗೆ ಎನ್ನುವುದೂ ಕೂಡ ಲೋಕಪ್ರಸಿದ್ಧವಾದ ನಿರ್ಣಯವಾಗಿದೆ. ಆದರೆ ಇದಕ್ಕೆ ಕೆಲವು ಅಪವಾದಗಳೂ ಇವೆ. ಅವುಗಳ ಪೈಕಿ ಅಮೃತಾ ಪ್ರೀತಂ ಮತ್ತು ಇಮ್ರೋಜ್ ನಡುವೆ ಇದ್ದ ಸಂಬಂಧ ನೆನೆಯಲು ಯೋಗ್ಯವಾದದ್ದು. ಹೌದು 'ಪ್ರೇಮ ಶಾಶ್ವತವೇ ಹೊರತು; ಪ್ರೇಮಿಗಳಲ್ಲ!'

'ಪ್ರೇಮ ಎನ್ನುವುದು ಕುರುಡು, ಅದಕ್ಕೆ ಕಣ್ಣಿಲ್ಲ' ಎಂಬ ಅವೈಚಾರಿಕ ನುಡಿಯೊಂದು ಜನಸಾಮಾನ್ಯರ ನಡುವೆ ಈಗಾಗಲೇ ಪ್ರಸಿದ್ಧಿಯಾಗಿದೆ. ಆದರೆ ಇದೆಲ್ಲವನ್ನೂ ಮೀರಿ ಪ್ರೇಮಕ್ಕೆ ವಿವೇಕವೂ ಇರಬೇಕೆಂದು ಟಾಲ್‌ಸ್ಟಾಯ್ ಮಹರ್ಷಿ 'ನರ್ತನ ಗೋಷ್ಠಿಯ ನಂತರ' ಎನ್ನುವ ತನ್ನದೊಂದು ಕಥೆಯಲ್ಲಿ ಅತ್ಯಂತ ನವುರಾಗಿ ಚಿತ್ರಿಸಿದ್ದಾರೆ. ಕತೆಯಲ್ಲಿ ಬರುವ ಯುವಕ ಎಲ್ಲರ ಕನಸಿನ ಕನ್ಯೆಯಂತಿದ್ದ ಸುಂದರಿ ವಾರೆನ್ಕಳನ್ನು ಪ್ರೀತಿಸತೊಡಗುತ್ತಾನೆ. ವಾರೆನ್ಕ ಸೈನ್ಯದಲ್ಲಿದ್ದ ಕರ್ನಲ್‌ನ ಮಗಳು ಎಂಬುದು ಆತನಿಗೆ ಅಷ್ಟಾಗಿ ತಿಳಿಯದ ವಿಚಾರ. ಒಂದು ಸಂಜೆ ವಾರೆನ್ಕಳ ಮನೆಗೆ ನರ್ತನಗೋಷ್ಠಿಗೆ ಯುವಕ ಹೋಗುತ್ತಾನೆ. ಇಡೀ ರಾತ್ರಿ ಷಾಂಪೇನ್ ಮತ್ತು ಮಜೂರ್ಕ ನರ್ತನದಲ್ಲಿ ಎಲ್ಲರೂ ಮುಳುಗಿರುತ್ತಾರೆ. ಎಲ್ಲರ ಊಟವಾದ ನಂತರ ಮಜೂರ್ಕ ನರ್ತನ ಕೊನೆಗೊಳ್ಳುತ್ತದೆ. ಯುವಕ ವಾರೆನ್ಕಳನ್ನೇ ತನ್ನೊಳಗೆ ತುಂಬಿಕೊಂಡು ಅಲ್ಲಿಂದ ಬೆಳಗಿನ ಜಾವದಲ್ಲಿ ಮನೆಯ ಕಡೆ ಹೊರಡುತ್ತಾನೆ.

ವಾರೆನ್ಕಳ ಮನೆಯಿಂದ ಸ್ವಲ್ಪದೂರವಿದ್ದ ಮೈದಾನದ ಬಳಿಗೆ ಬರುವಷ್ಟರಲ್ಲಿ ಒಂದು ದೊಡ್ಡ ಸೈನ್ಯದ ಗುಂಪು ವಿಕಾರವಾಗಿ ಕೂಗುತ್ತಾ ಬರುತ್ತಿರುತ್ತದೆ. ಅವರ ನಡುವೆ ಜೈಲಿನಿಂದ ಓಡಿಹೋಗಲು ಯತ್ನಿಸಿದ್ದ ತಾತಾರ್ ಒಬ್ಬನನ್ನು ಹಿಡಿದು ಅವನಿಗೆ ಸಾಯುವ ಹಾಗೆ ಹೊಡೆಯುತ್ತಾ ಸೈನಿಕರು ಬರುತ್ತಿರುತ್ತಾರೆ. ಆ ಕೈದಿಯ ಇಡೀ ದೇಹ ಹೊಡೆತಗಳಿಂದ ಕಲ್ಲುಬಂಡೆಯಂತಾಗಿತ್ತು. 'ನನಗೆ ದಯೆ ತೋರಿ ಸೋದರರೆ' ಎಂದು ಕೈದಿ ಮೊರೆಯಿಡುತ್ತಿದ್ದರೂ ಯಾರೂ ಅವನ ಮೊರೆಗೆ ಸ್ಪಂದಿಸುತ್ತಿರಲಿಲ್ಲ! ದಂಡಿಸುತ್ತಿದ್ದವರು ಅಷ್ಟೊಂದು ನಿರ್ಭಾವುಕರಾಗಿದ್ದರು. ಇಡೀ ಘಟನೆಯ ನೇತೃತ್ವ ವಹಿಸಿದವರು ವಾರೆನ್ಕಳ ತಂದೆ ಕರ್ನಲ್. ಇದನ್ನು ನೋಡಿದ ಯುವಕನ ಮನಸ್ಸು ಕದಡಿಹೋಯಿತು. ನಿಧಾನವಾಗಿ ಅವನ ಪ್ರೇಮ ಕರಗತೊಡಗಿತು. ವಾರೆನ್ಕಳನ್ನು ನೆನೆದಾಗಲೆಲ್ಲಾ ಅವನಿಗೆ ಅವಳ ತಂದೆಯ ನಿರ್ದಯವಾದ, ಕ್ರೌರ್ಯದಿಂದ ಕೂಡಿದ ಚಿತ್ರವೇ ಕಣ್ಣಮುಂದೆ ಬರತೊಡಗಿತು. ಕೊನೆಗೆ 'ಅವನ ಪ್ರೇಮ ಕ್ಷಯಿಸಿಹೋಯಿತು'. ಪ್ರೇಮಕ್ಕೆ ಕಣ್ಣಿಲ್ಲದಿದ್ದರೂ ಚಿಂತೆಯಿಲ್ಲ! ಆದರೆ ವಿವೇಕವಂತೂ ಇರಲೇಬೇಕು ಎನ್ನುವುದನ್ನು ಟಾಲ್‌ಸ್ಟಾಯ್ ತಮ್ಮ ಕೊನೆಗಾಲದ ಕಥೆಯೊಂದರಲ್ಲಿ ಕಾಣಿಸಿದ್ದಾರೆ. ಪ್ರೀತಿಯ ಬಗೆಗೆ ಜಗತ್ತು ಹೊಂದಿರುವ ಸಿದ್ಧ ಮಾದರಿಯ ಗ್ರಹಿಕೆಯನ್ನು ಈ ಪುಟ್ಟ ಕಥೆ ಭಗ್ನಗೊಳಿಸುತ್ತದೆ.

ಯುವ ಮನಸ್ಸುಗಳಿಗೆ ಪ್ರೀತಿ ಎಂಬುದು ಕಾತುರತೆಯ ಪ್ರಕ್ಷುಬ್ದ ಸಾಗರದಂತೆ. ಯಾರನ್ನುಬೇಕಾದರೂ ಎದುರುಹಾಕಿಕೊಳ್ಳಲು ಸಿದ್ಧವಾದ ಮನಸ್ಸು, ನೋವು, ಸಂತಸ, ಲೋಕವನ್ನೇ ಧಿಕ್ಕರಿಸುವ ಉನ್ಮತ್ತ ಮನಸ್ಥಿತಿ ಇವೆಲ್ಲವೂ ಸ್ಥೂಲವಾಗಿ ಅದರ ರೂಪಾತ್ಮಕ ಹೊರರೂಪಗಳು. ಇವೆಲ್ಲವನ್ನೂ ಮೀರಿ 'ಪ್ರೀತಿಯು ಮೂಲಭೂತವಾಗಿ ಒಂದು ನಿರ್ದಿಷ್ಟ ವ್ಯಕ್ತಿಯ ಬಗೆಗಿನ ಅಥವಾ ವಸ್ತುವಿನೊಂದಿಗಿನ ಸಂಬಂಧವಲ್ಲ. ಅದೊಂದು ದೃಷ್ಟಿಕೋನ. ಪ್ರೀತಿ ಎಂಬುದು ಒಲವಿನ ಭಾಷೆಯೇ ಹೊರತು ಅರ್ಥದ ಭಾಷೆಯಲ್ಲ! ಅದೊಂದು ಅರಿವಿನ ಭಾಷೆ' ಎಂದು ಎರಿಕ್ ಫ್ರಾಂ ವಿವರಿಸುತ್ತಾನೆ.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಕಾಲ ಹಿಂದಕ್ಕೆ ಸಾಗುವುದಿಲ್ಲ. ಆದರೆ ಅದರ ಜೊತೆ ಸಾಗದೇ ಇದ್ದರೆ ನಾವು ನಿಂತಲ್ಲೇ ನಿಲ್ಲಬೇಕಾಗುತ್ತದೆ.

  —ಶಿವರಾಮ ಕಾರಂತ

- ನಾಲ್ಕು ದಿನ ದೂರ ಹೋಗಿ ನೋಡಿ, ಜನ ನಿಮ್ಮನ್ನು ಮರೆತೇ ಬಿಡ್ತಾರೆ. ಜೀವನವಿಡೀ ಮನುಷ್ಯ ತಾನು ಎಲ್ಲರಿಗೂ ಬೇಕಾದವನು ಅನ್ನೋ ಭ್ರಮೇಲಿ ಇರ್ತಾನೆ. ನಿಜ ಏನು ಅಂದ್ರೆ ಜನರಿಗೆ ನೀವು ಇದ್ದರೂ ಇಲ್ಲದಿದ್ದರೂ ಏನೂ ವ್ಯತ್ಯಾಸ ಆಗುವುದಿಲ್ಲ.

  —ಕುವೆಂಪು

- ಭಯವೆಂದರೇನು? ದೌರ್ಬಲ್ಯದ ಚಿಹ್ನೆ. ಈ ಪ್ರಪಂಚದ ಅಲಕ್ಷ್ಯ, ಅಪಹಾಸ್ಯಗಳನ್ನು ಲಕ್ಷಿಸದೆ ವ್ಯಕ್ತಿ ತನ್ನ ಕರ್ತವ್ಯ ಮಾಡುತ್ತಾ ಹೋಗಬೇಕು.

  —ಸ್ವಾಮಿ ವಿವೇಕಾನಂದ

- ಟೀಕೆಗಳಿಗೆ ನಮ್ಮ ಜೀವನ, ವ್ಯಕ್ತಿತ್ವ, ನಡವಳಿಕೆಗಳೇ ಉತ್ತರ ಹೇಳಬೇಕೆ ಹೊರತು ಮಾತಿನಿಂದ ಹೇಳಿ ಪ್ರಯೋಜನ ಇಲ್ಲ.

  —ಪೂರ್ಣಚಂದ್ರ ತೇಜಸ್ವಿ

- ಹಸಿವು ಚೆನ್ನಾಗಿದ್ದರೆ ಊಟ ಚೆನ್ನಾಗಿಯೇ ಇರುತ್ತದೆ.

  —ಬೀchi

- ಒಳ್ಳೆತನ ಸಹಜವೇನಲ್ಲ. ಒಳ್ಳೆತನ ಅಸಹಜವೂ ಅಲ್ಲ.

  —ಗೋಪಾಲ ಕೃಷ್ಣ ಅಡಿಗ

- ಹತ್ತು ಜನ ಮಿತ್ರರ ಬಳಿ ಒಬ್ಬರ ಬಗ್ಗೆ ಕೆಟ್ಟದು ಮಾತನಾಡುವುದಕ್ಕಿಂತ ಒಂಟಿಯಾಗಿ ಕುಳಿತು ಒಂದು ಪುಸ್ತಕ ಓದುವುದು ಶ್ರೇಷ್ಠ ಕೆಲಸ.

  —ಬಿ.ಆರ್. ಅಂಬೇಡ್ಕರ್